ಶ್ರೀ ಕೆ. ಯೆಂಕಟಪ್ಪ :—ಇವೊತ್ತು ಲೋಕಲ್ ಕ್ಯಾಂಡಿಡೇಟ್ಸ್‌ನ್ನು 6 ತಿಂಗಳು 3 ತಿಂಗಳು ವೇಕೆನ್ಸಿಯಲ್ಲಿ ನೇಮಕ ಮಾಡಿಕೊಂಡಿದ್ದೀರಿ ಎಂದು ಹೇಳಿದ್ದೀರಿ. 2-3 ವರ್ಷ ಇರತಕ್ಕಂಥ ವೇಕೆನ್ಸಿಯಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತಪ್ಪಿಸಬೇಕು. ಪರ್ಮನೆಂಟಾಗಿ ರೆಕ್ರೂಟ್ ಮಾಡಿಕೊಳ್ಳ ಬಹುದಿತ್ತು.

ಶ್ರೀ ಹೆಚ್. ಸಿದ್ದವೀರಪ್ಪ :—ಈಗ ಅವರಿಗೆ 5 ತಿಂಗಳಿಂದ ಸಂಬಳ ಇಲ್ಲ ಎಂದು ಎ. ಜಿ. ಅವರು ಹಿಡಿದು ಹಾಕಿದ್ದಾರೆ. ಆದುದರಿಂದ ಇನ್ನು ಮುಂದೆ ಕಂಟ್ರಾಕ್ಟ್ ಬೇಸಿನ್ ಮೇಲೆ ನೇಮಕ ಮಾಡಿಕೊಂಡು, 6 ತಿಂಗಳಿಗೊಂದು ಸಾರಿ ರಿನ್ಯೂ ಮಾಡಬೇಕು ಎಂದು ಮಾಡಿದ್ದೇವೆ. ಇರತಕ್ಕ ಕಾನೂನಿನಲ್ಲಿ ತೊಂದರೆ ಇದೆ. They are not in service legally.

ಶ್ರೀ ಎಂ. ಎಸ್. ಕೃಷ್ಣನ್ :—ಸ್ವಾಮಿ, ಅವರ ಸರ್ವೀಸ್ ರೆಗ್ಯುಲರೈಸ್ ಮಾಡದೆ ಇರವುದರಿಂದ, ಈಗ ಅವರ ವಯಸ್ಸು ಮೀರಿ ಹೋಗಿದೆ. ಅವರಿಗೆ ಸರ್ಕಾರಿ ಕೆಲಸ ಸಿಕ್ಕುವುದಿಲ್ಲ ಮತ್ತು ಬೇರೆ ಎಲ್ಲಿಯೂ ಕೆಲಸ ಸಿಕ್ಕದೆ ಬೀದಿಪಾಲು ಆಗುವ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರ ಅವರಿಗೆ ರಿಯಾಯಿತಿ ತೋರಿಸುವ ಪ್ರಶ್ನೆ ಬಂದಿದೆ

ಶ್ರೀ ಹೆಚ್. ಸಿದ್ದವೀರಪ್ಪ :—ಕಾನೂನು ರೀತಿ ಏನು ಮಾಡಲಿಕ್ಕೆ ಸಾಧ್ಯ ಇದ್ದರೆ ಹೇಳಿ ನಾನು ಯೋಚನೆ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಲು ನಾಯ್ಡು :- ಹಿಂದೆ ಇದೇ ತರಹ ಡೆಂಟಲ್ ಅಸಿಸ್ಟೆಂಟ್ ಸರಜನ್ಸ್ ರೆಗ್ಯುಲರೈಸ್ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಹಾಗೆ ಮಾಡಿ ಇವರಿಗೂ ಆ ಬೆನಿಫಿಟ್ ಎಕ್ಸ್‌ಟೆಂಡ್ ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :— ಇವರಿಗೆ ಕೊಡಲಿಕ್ಕೆ ಆಗುತ್ತದೆಯೋ ಇಲ್ಲವೋ ಆ ಮೂತು ಬೇರೆ, ಆ ರೀತಿ ಮಾಡಿದ್ದಾರೆಯೇ ಎನ್ನುವುದನ್ನು ವಿಚಾರ ಮಾಡುತ್ತೇನೆ.

VETERINARY HOSPITAL IN YALAVATHY VILLAGE

216. Sri V. V. Wai (Shirahatti).—

Will the Minister for Agriculture and Animal

(SRI V. V. WAI)

Husbandry be pleased to state :—

(*a*) whether it has come to the notice of the Government that Yalavathy area is a valuable black soil area and that the ryots there own valuable cattle wealth ;

(*b*) whether it has come to the notice of the Government that the people of Yalavathy and 4 to 5 miles round about area having 10 to 15 thousand cattle wealth have to go to Shirahatti, Lakshmeswara Veterinary Hospital which is 10 to 12 miles away for treatment of cattle ;

(*c*) whether the Government would take immediate measures to meet the growing demand of the people of this area for setting up of a Veterinary Hospital ?

SRI N. CHIKKE GOWDA (Minister for Agriculture and Animal Husbandry).—

(*a*) Yes

(*b*) Yes

(*c*) This demand is under consideration and the decision will be taken during 1974-75.

ಶ್ರೀ ಬಿ. ಜಿ. ಬಣಕಾರ್ :—ರೈತರಿಗೆ, ಜಾನುವಾರುಗಳು ಮೂಲ ಆಧಾರ ಸ್ತಂಭ, ಹೀಗಿರುವುದರಿಂದ ಎಷ್ಟು ಜಾನುವಾರುಗಳಿಗ ಒಂದು ಆಸ್ಪತ್ರೆ ಕೊಡುತ್ತೀರಾ ಮತ್ತು ಅದರ ಪ್ರಕಾರ ರಾಜ್ಯದಲ್ಲಿ ಎಷ್ಟು ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ : ರೈತರ ಸಂಪತ್ತು, ಪಶುಸಂಪತ್ತು ಎನ್ನುವುದು ನಿರ್ವಿವಾದ ಸಂಗತಿ. ಇವೊತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಲೆನಾಡು ಪ್ರದೇಶದಲ್ಲಿ 10 ಸಾವಿರ ಜಾನುವಾರು ಇದ್ದರೆ ಮತ್ತು ಮೈದಾನ ಪ್ರದೇಶದಲ್ಲಿ 15 ಸಾವಿರ ಜಾನುವಾರು ಇದ್ದರೆ ಅಂತಹ ಪ್ರದೇಶಗಳಿಗೆ ಒಂದೊಂದು ಪಶುವೈದ್ಯ

ಶಾಲೆಯನ್ನು ಮಂಜೂರು ಮಾಡಿದ್ದೇವೆ. ಇದರ ಪ್ರಕಾರ 1973-74ರ ಸಾಲಿನಲ್ಲಿ 137 ಗ್ರಾಮಗಳಿಗೆ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದೆ. ಸಂಸ್ಥಾನಾದ್ಯಂತ ಈ ಒಂದು ಜಾನುವಾರು ಗಣತಿಯನ್ನು ಲೆಕ್ಕದಲ್ಲಿ ಇಟ್ಟು ಕೊಂಡು ಮೂರರಿಂದ ಐದು ಮೈಲಿ ಘಾನಲೆಯೊಳಗೆ 10-15 ಸಾವಿರ ಜಾನುವಾರು ಜನಸಂಖ್ಯೆ ಇರುವ ಕಡೆ ಪಶುವೈದ್ಯ ಶಾಲೆಯನ್ನು ಮಂಜೂರಾತಿ ಮಾಡಿದೆ.

ಶ್ರೀ ಬಿ. ಜಿ. ಬಣಕಾರ್ :—ಅನೇಕ ಜಾನುವಾರು ಆಸ್ಪತ್ರೆಗಳಲ್ಲಿ ಔಷಧಿ ಒದಗಿಸುವ ಬಗ್ಗೆ ಯಾವ ಏರ್ಪಾಡು ಮಾಡಿದ್ದೀರಿ ?

ಶ್ರೀ ಎನ್. ಚಿಕ್ಕೇಗೌಡ :—ಆಸ್ಪತ್ರೆಗಳು ಕೊಟ್ಟಮೇಲೆ ಔಷಧಿಗಳನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಂಡು ಕಳೆದ ವರ್ಷದೊಳಗೆ 18 ಲಕ್ಷ ರೂಪಾಯಿ ಗಳನ್ನು ಔಷಧಿಗಾಗಿ ಒದಗಿಸಿದೆ.

SELECTION GRADE TO HEAD CONSTABLES

132. SRI G. PUTTASWAMY (Mudigere).— Will the Chief Minister be pleased to state :

(a) Whether it has come to the notice of the Government that Police Constables in the scale of Rs. 80-3-110-4-130-6-170 are given Selection Grade, after completion of 12 years in the rank of the Head Constable, as per Government Order,

(b) Whether it has come to the notice of the Government that the Head Constables of the Police Department who have been holding the scale of II Dn. Clerk, *i.e.*, Rs. 90-4-110-5-170-EB-6-200 have not been given the Selection Grade even though the Head Constables have completed more than 10 years of service,

(c) Whether Government intend to consider provide Selection Grade to the Head Constables who have completed 10 years of service in Chickmagalur District who are holding the scale of II Dn. Clerks ?